

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಹತ್ತಿ ಉರಿಯುತಿದೆ ಮತ್ಸರದ ಸುರುಸುರು ಬತ್ತಿ!

ಈಗ ಎಲ್ಲೆಲ್ಲೂ ದೀಪಾವಳಿ ಹಬ್ಬದ ಸಡಗರ, ಸಂಭ್ರಮ. ದಿನನಿತ್ಯದ ವ್ಯವಹಾರಗಳಲ್ಲಿ ಮೈಮರೆತು ಒಂದೇ ಸ್ಥಳದಲ್ಲಿದ್ದೂ ಮಾತನಾಡಿಸಲು ಪುರಸೊತ್ತು ಆಗದ ಜನ ವರ್ಷಕ್ಕೊಮ್ಮೆ ನೆನೆಸಿಕೊಂಡು ತಮ್ಮ ಹೃದಯದಲ್ಲಿರುವ ಪ್ರೀತಿಯನ್ನು ಹಂಚಿಕೊಳ್ಳುತ್ತಾರೆ. ಸ್ನೇಹಿತರು, ಬಂಧುಗಳು ಎಲ್ಲೇ ಇರಲಿ ಅವರವರ ಆತ್ಮೀಯರಿಗೆ ದೀಪಾವಳಿಯ ಶುಭಾಶಯಗಳನ್ನು ಕಳುಹಿಸುತ್ತಾರೆ. ಈ ಮೊದಲು ಬಣ್ಣ ಬಣ್ಣದ ಚಿತ್ತಾರಗಳನ್ನುಳ್ಳ 'ಗ್ರೀಟಿಂಗ್ಸ್'ಗಳನ್ನು ಅಂಚೆಯಲ್ಲಿ ಕಳುಹಿಸುತ್ತಿದ್ದರು. ಈಗ ತಂತ್ರಜ್ಞಾನ ವಿಕಾಸಗೊಂಡಂತೆ ಮೊಬೈಲ್ ಮೂಲಕವೋ, ಮಿಂಚೋಲೆ ಮೂಲಕವೋ ಶುಭಹಾರೈಕೆಗಳನ್ನು ಸುಲಭವಾಗಿ ಕಳುಹಿಸಲು ಸಾಧ್ಯವಾಗಿದೆ. ಮಾರುಕಟ್ಟೆಯಲ್ಲಿ ದೊರೆಯುವ ಆಕರ್ಷಕವಾದ ಮಣ್ಣಿನ ಹಣತೆಗಳು, ಲೋಹದ ದೀಪಗಳು 'ಮ್ಯಾಕ್ರೋಮೀಡಿಯಾ' ಮುಖಾಂತರ ರೂಪಾಂತರಗೊಂಡು ಎಣ್ಣೆ ತೀರದ ದೀಪಗಳಾಗಿ, ಗಾಳಿಯ ಹೊಡೆತಕ್ಕೆ ನಂದದ ನಂದಾದೀಪಗಳಾಗಿ ಕಂಗೊಳಿಸುತ್ತಾ ಅಂತರಜಾಲದಲ್ಲಿ ಮನೆಯಿಂದ ಮನೆಗೆ ರವಾನೆಯಾಗುತ್ತಿವೆ. ಮಿಂಚೋಲೆಯಲ್ಲಿ ಬಂದಾಗ ಅವು ಯಾವುದೋ ದೀಪದ ಚಿತ್ರಗಳಾಗಿ ಕಾಣಿಸದೆ ನಮ್ಮ ಕಣ್ಣೆದುರಿಗೇ ನಿಜವಾಗಿ ಉರಿಯುತ್ತಿರುವ ಚಲನಶೀಲ ದೀಪಗಳಾಗಿ ಕಾಣಿಸುತ್ತವೆ. ದೂರದ ದೇಶದಲ್ಲಿರುವ ಆತ್ಮೀಯ ಸ್ನೇಹಿತರು, ಬಂಧುಗಳು ವಿಶ್ವದ ಯಾವುದೇ ಮೂಲೆಯಿಂದ ಕಳುಹಿಸುವ ಈ ದೀಪಗಳಿಗೆ ಸುಂಕ ತೆರಬೇಕಾಗಿಲ್ಲ. 'ವಸುಧೈವ ಕುಟುಂಬಕಂ' ಎಂದು ಸಾರಿದ ಪ್ರಾಚೀನ ಋಷಿಮುನಿಗಳ ವಿಶ್ವಕುಟುಂಬಿತ್ವದ ತಾತ್ವಿಕ ದರ್ಶನವನ್ನು ಇಂದಿನ ಅಂತರಜಾಲ ಸಂದರ್ಭದಲ್ಲಿ ಸಾಕ್ಷೀಗೊಳಿಸಿದೆ.



"ತಮಸೋ ಮಾ ಜ್ಯೋತಿರ್ಗಮಯ" ಎಂದು ಸಂದೇಶ ಸಾರುವ ಈ ಬೆಳಕಿನ ಹಬ್ಬ ಇಂದು ಮನೆ ಮನೆಯ ಒಳ ಹೊರಗನ್ನು ಬೆಳಗಲು ಬಂದಿದೆ. ಅಂತೆಯೇ ತಮ್ಮ ಜ್ಞಾನಜ್ಯೋತಿಯು 'ಬಿಸಿಲು ಬೆಳದಿಂಗಳು' ಅಂಕಣದ ಮುಖಾಂತರ ಬೆಳಗಿ ನಮ್ಮ ಅಜ್ಞಾನದ ಅಂಧಕಾರವೆಂಬ ಕತ್ತಲೆಯನ್ನು ದೂರ ಮಾಡಿ ಹರುಷ ಚೆಲ್ಲುವ ಸಂಭ್ರಮ ನಮ್ಮದಾಗಲಿ ಎಂದು ಹಾರೈಸಿ ಓದುಗರೊಬ್ಬರಾದ ಬೆಂಗಳೂರಿನ ಶಕುಂತಲಾ ಬಾಗಲಕೋಟೆಯವರು ಬರೆದ ಮಿಂಚೋಲೆಯನ್ನು ನೋಡಿದಾಗ ನಮ್ಮ ನೆನಪಿಗೆ ಬಂದದ್ದು ರಾಷ್ಟ್ರಕವಿ ಜಿ.ಎಸ್ ಶಿವರುದ್ರಪ್ಪನವರು ಬರೆದ ಈ ಕೆಳಗಿನ ಕವಿತೆ:

**ವೇದ, ಶಾಸ್ತ್ರ, ಪುರಾಣ, ಇತಿಹಾಸ, ಕಾವ್ಯ, ವಿಜ್ಞಾನಗಳ**
**ಮತಾಪು-ಪಟಾಕಿ-ಸುರುಸುರುಬತ್ತಿ – ಹೂಬಾಣ ಸುಟ್ಟದ್ದೇವೆ**
**"ತಮಸೋ ಮಾ ಜ್ಯೋತಿರ್ಗಮಯ" ಎನ್ನುತ್ತ ಬರೀ**
**ಬೂದಿಯನ್ನೇ ಕೊನೆಗೆ ಕಂಡಿದ್ದೇವೆ...**

ಕವಿತೆಯ ಈ ಮೇಲಿನ ಸಾಲುಗಳನ್ನು ಓದುವಾಗ ನಿರಾಶಾವಾದಿಯಾಗಿ ಕಾಣುವ ಕವಿ ಅಲ್ಲಿಗೇ ನಿಲ್ಲುವುದಿಲ್ಲ. ಮುಂದುವರಿದು ಅವರು ಹೇಳುತ್ತಾರೆ:

**ಆದರೂ ಹಣತೆ ಹಚ್ಚುತ್ತೇನೆ ನಾನೂ**
**ಕತ್ತಲೆಯನ್ನು ದಾಟುತ್ತೇನೆಂಬ ಭ್ರಮೆಯಿಂದಲ್ಲ**
**ಇರುವಷ್ಟು ಹೊತ್ತು ನಿನ್ನ ಮುಖ ನಾನು, ನನ್ನ ಮುಖ ನೀನು**
**ನೋಡಬಹುದೆಂಬ ಒಂದೇ ಒಂದು ಆಸೆಯಿಂದ**
**ಹಣತೆ ಆರಿದ ಮೇಲೆ,**
**ನೀನು ಯಾರೋ, ಮತ್ತೆ ನಾನು ಯಾರೋ! – ("ನನ್ನ ಹಣತೆ")**

ಜಿ.ಎಸ್.ಎಸ್ ರವರಿಗೆ ಅತ್ಯಂತ ಪ್ರಿಯವಾದ ಕವಿತೆ ಇದು. ಅದೆಷ್ಟೋ ಕವಿಗೋಷ್ಠಿಗಳಲ್ಲಿ ಅವರು ಈ ಕವಿತೆಯನ್ನು ವಾಚಿಸಿದ್ದಾರೆ. ಪದ್ಯದ ಮೊದಲ ಭಾಗದಲ್ಲಿ ಕವಿ ಬೂದಿಯನ್ನು ಕಂಡದ್ದು ದೀಪದ ಬೆಳಕಿನಿಂದ ಅಲ್ಲ; ಬದುಕನ್ನು ಬೆಳಗಿಸುವ ಜ್ಞಾನದ ದೀಪವನ್ನು ಅನಾದರಣೆ ಮಾಡಿ, ಗೊಡ್ಡುಸಂಪ್ರದಾಯಗಳ ಮತಾಪು-ಪಟಾಕಿ-ಸುರುಸುರುಬತ್ತಿಯನ್ನು ಸುಟ್ಟಿದ್ದರಿಂದ! ದೀಪ ಜ್ಞಾನದ ಪ್ರತೀಕ; ಪಟಾಕಿ ಅಹಂಕಾರದ ಪ್ರತೀಕ. 'ಅವನು ಬಹಳ ಪಟಾಕಿ ಹೊಡೆಯುತ್ತಾನೆ' ಎನ್ನುವ ಆಡುಮಾತಿನಲ್ಲಿ ಅಡಗಿರುವ ವ್ಯಕ್ತಿಯ ಪೊಳ್ಳುತನವನ್ನು ಇಲ್ಲಿ ಗಮನಿಸಬಹುದು. ಅನೇಕ ದೀಪಾವಳಿಗಳು ಬಂದು ಹೋಗಿವೆ. ಆದರೂ ಮನುಷ್ಯನ ಹೃದಯ ಮಾತ್ರ ಇನ್ನೂ ಕಗ್ಗತ್ತಲ ಕೋಣೆಯಾಗಿಯೇ ಉಳಿದಿದೆ.

'ಬರೀ ಬೂದಿಯನ್ನೇ ಕೊನೆಗೆ ಕಂಡಿದ್ದೇವೆ' ಎನ್ನುವ ಮೇಲಿನ ಕವಿತೆಯಲ್ಲಿರುವ ಅಸಮಾಧಾನಕ್ಕೆ, 'ದೀಪ ಆರಿದ ಮೇಲೆ ನೀನು ಯಾರೋ, ಮತ್ತೆ ನಾನು ಯಾರೋ!' ಎಂಬ ಅನುಮಾನಕ್ಕೆ ಸರಿಯಾದ ಉತ್ತರ ಅಲ್ಲಮಪ್ರಭು, ಬಸವಣ್ಣ ಮತ್ತು ಅಕ್ಕಮಹಾದೇವಿಯ ಈ ಮುಂದಿನ ವಚನಗಳಲ್ಲಿದೆ:

**ಪ್ರಣತೆ ಇದೆ ಬತ್ತಿಯೂ ಇದೆ;**
**ಜ್ಯೋತಿ ಬೆಳಗುವಡೆ,**
**ತೈಲವಿಲ್ಲದೆ ಪ್ರಭೆ ತಾನೆಲ್ಲಿಯದೋ?**
**ಗುರುವಿದೆ ಲಿಂಗವಿದೆ, ಶಿಷ್ಯನ ಸುಜ್ಞಾನ ಅಂಕುರಿಸದನ್ನಕ್ಕರ**
**ಭಕ್ತಿ ಎಲ್ಲಿಯದೋ?**
**'ಸೋಽಹಂ' ಎಂಬುದ ಕೇಳಿ ದಾಸೋಹವ ಮಾಡದಿರ್ದಡೆ**
**ಅತಿಗಳೆವೆ ನೋಡಾ ಗುಹೇಶ್ವರಾ!**

ಹಣತೆ ಮತ್ತು ಬತ್ತಿ ಇದ್ದ ಮಾತ್ರಕ್ಕೇ ದೀಪ ಬೆಳಗುವುದಿಲ್ಲ. ದೀಪ ಬೆಳಗಬೇಕಾದರೆ ಎಣ್ಣೆ ಬೇಕೇ ಬೇಕು. ಹಾಗೆಯೇ ಪ್ರಣತೆಯಂತೆ ಗುರು, ಬತ್ತಿಯಂತೆ ಲಿಂಗ ಇದ್ದ ಮಾತ್ರಕ್ಕೆ ಏನೂ ಆಗುವುದಿಲ್ಲ. ಅವುಗಳ ಜೊತೆಗೆ ತೈಲದಂತೆ ಭಕ್ತಿಯೂ ಸಹ ಇದ್ದು ಶಿಷ್ಯನಲ್ಲಿ ಸುಜ್ಞಾನ ಉದಯಿಸಿದಾಗ ಮಾತ್ರ ಸಿದ್ಧಿಯನ್ನು ಮುಟ್ಟಲು ಸಾಧ್ಯ. 'ಸೋಽಹಂ' ಎಂದರೆ ಪರಬ್ರಹ್ಮನಾದ 'ಅವನೇ ನಾನು' ಎಂಬ ಭಾವ. ವೇದಾಂತದಲ್ಲಿ ಕೇಳಿಬರುವ 'ತತ್ವಮಸಿ, ಅಹಂ ಬ್ರಹ್ಮಾಸ್ಮಿ, ಪ್ರಜ್ಞಾನಂ ಬ್ರಹ್ಮ, ಅಯಮಾತ್ಮಾ ಬ್ರಹ್ಮ, ಸರ್ವಂ ಖಲ್ವಿದಂ ಬ್ರಹ್ಮ' ಎಂಬ ಪಂಚಮಹಾವಾಕ್ಯಗಳಿಗೆ ಸಂವಾದಿಯಾದ ಅರ್ಥವುಳ್ಳ ನುಡಿಗಟ್ಟು. ಇಲ್ಲಿ 'ಅಹಂ' ಎಂಬುದು ಗರ್ವ ಅಥವಾ ಅಹಂಕಾರದಿಂದ ಬಂದದ್ದಲ್ಲ; ಬರಬಾರದೂ ಕೂಡ. ಅದಕ್ಕಾಗಿಯೇ "ಜನ್ಮಜನ್ಮಕ್ಕೆ ಹೋಗಲೀಯದೆ 'ಸೋಽಹಂ' ಎಂದೆನಿಸದೆ, 'ದಾಸೋಽಹಂ' ಎಂದೆನಿಸಯ್ಯಾ ಕೂಡಲಸಂಗಮದೇವಾ" ಎನ್ನುತ್ತಾರೆ ಬಸವಣ್ಣನವರು. 'ನಾನು ದಾಸ' ಎಂಬ 'ದಾಸೋಽಹಂ' ಭಾವ ಮೊದಲು ಬರಬೇಕು. 'ದಾಸೋಽಹಂ' ಭಾವದಿಂದಲೇ 'ಸೋಽಹಂ' ಭಾವ ಸಿದ್ಧಿಸಬೇಕು. ಹಾಗೆ 'ದಾಸೋಽಹಂ' ಭಾವದಿಂದ ಸಿದ್ಧಿಸಿದ 'ಸೋಽಹಂ' ಎಂಬುದು ಪರಿಶುದ್ಧ ಜ್ಞಾನವಾಗಿದ್ದು ಅಹಂಕಾರದ ಲವಲೇಶವೂ ಅಲ್ಲಿರುವುದಿಲ್ಲ. ಈ ಪರಿಶುದ್ಧ ಜ್ಞಾನವು ಭಕ್ತನನ್ನು ಐಕ್ಯ ಸ್ಥಿತಿಗೆ ಕರೆದೊಯ್ಯುತ್ತದೆ. ಆ ಸ್ಥಿತಿಯನ್ನು ವರ್ಣಿಸಲು ಭಕ್ತನಿಗೆ ಶಬ್ದಗಳೇ ದೊರೆಯವು. ಆಗ ಅದು ಬಸವಣ್ಣನವರು ಹೇಳುವಂತೆ 'ಮೂಗ ಕಂಡ ಕನಸಿನಂತೆ' ಶಬ್ದಾತೀತ, 'ಇಲ್ಲಿಂದ ಮುಂದೆ ಶಬ್ದವಿಲ್ಲ'. ಇನ್ನು 'ದೀಪ ಆರಿದ ಮೇಲೆ' ಎನ್ನುವ ಕವಿಯ ಮಾತು ಲೌಕಿಕ ಸ್ತರದಲ್ಲಿ ಹೇಳಿದ ಮಾತು. ಆಧ್ಯಾತ್ಮಿಕ ಸ್ತರದಲ್ಲಿ ದೀಪ ಆರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಚೈತನ್ಯಸ್ವರೂಪನಾದ ಆತ್ಮ ಚಿರಂತನ. ಭವಬಂಧನದಿಂದ ಮುಕ್ತಗೊಂಡ ಜೀವಾತ್ಮವು ಪರಮಾತ್ಮನೊಂದಿಗೆ ಒಂದಾದ 'ಐಕ್ಯ' ಸ್ಥಿತಿಯಲ್ಲಿ 'ನಾನು-ನೀನು' ಎಂಬ ಭೇದ ಇರುವುದಿಲ್ಲವೆಂಬುದನ್ನು ಅಕ್ಕಮಹಾದೇವಿಯ ಈ ಮುಂದಿನ ವಚನದಲ್ಲಿ ಮನಗಾಣಬಹುದು:

**ಲಿಂಗವೆನ್ನ ಲಿಂಗೈಕ್ಯವೆನ್ನೆ, ಸಂಗವೆನ್ನೆ ಸಮರಸವೆನ್ನೆ**
**ಆಯಿತೆನ್ನೆ ಆಗದೆನ್ನೆ, ನೀನೆನ್ನೆ ನಾನೆನ್ನೆ**
**ಚೆನ್ನಮಲ್ಲಿಕಾರ್ಜುನಯ್ಯಾ**
**ಲಿಂಗೈಕ್ಯವಾದ ಬಳಿಕ ಏನೂ ಎನ್ನೆ!**

ಕತ್ತಲಲ್ಲಿ ದೀಪ ಹಚ್ಚಿ ಆತ್ಮಾನುಸಂಧಾನ ಮಾಡುವ ಬದಲು ಪಟಾಕಿ ಹೊಡೆದು ಗಲಾಟೆ ಗದ್ದಲವೆಬ್ಬಿಸುವುದು ಇಂದಿನ ದೀಪಾವಳಿಯ ವಿಕೃತರೂಪವಾಗಿದೆ. ಇಂದು ಕಾಣುತ್ತಿರುವುದು ದೀಪಗಳ ಆವಳಿಯಲ್ಲ ಪಟಾಕಿಗಳ ಹಾವಳಿ! 'ದೀಪ ಹಚ್ಚು, ದೀಪ ಆರಿಸು' ಎಂಬ ಶಬ್ದಗಳನ್ನು ದಿನನಿತ್ಯದ ಮಾತುಗಳಲ್ಲಿ ಬಳಸುತ್ತಿರುತ್ತೇವೆ. ಉಪಕಾರ ಮಾಡಿದ ವ್ಯಕ್ತಿಯನ್ನು ಕುರಿತು 'ಅವರ ಹೆಸರು ಹೇಳಿ ದೀಪ ಹಚ್ಚುತ್ತೇನೆ' ಎಂದು ಸ್ಮರಣೆ ಮಾಡಿದರೆ ಮನೆಮುರುಕನನ್ನು ಕುರಿತು 'ಅವನು ಎಷ್ಟು ಮನೆ ದೀಪ ಆರಿಸಿದ್ದಾನೋ ಗೊತ್ತಿಲ್ಲ' ಎಂದು ಮೂದಲಿಸುತ್ತಾರೆ.

ಸಹೃದಯ ಓದುಗರೇ! ಇಂತಹ ಹಬ್ಬಗಳಂದು ಪುರಾಣಕಾಲದಲ್ಲಿದ್ದ ನರಕಾಸುರ, ತಾರಕಾಸುರ, ರಾವಣ ಇತ್ಯಾದಿ ರಾಕ್ಷಸರ ವಧೆಯಾಯಿತೆಂದು ತಿಳಿಯದೆ ಅವರೆಲ್ಲರೂ ನಮ್ಮೊಳಗೇ ಇನ್ನೂ ಜೀವಂತವಾಗಿದ್ದಾರೆಂದು ಭಾವಿಸಿ ನಮ್ಮೊಳಗಿರುವ ರಾಕ್ಷಸೀಗುಣಗಳನ್ನು ನಿರ್ಮೂಲನಗೊಳಿಸುವ ಪ್ರಯತ್ನ ಮಾಡಿದರೆ ಈ ಹಬ್ಬಗಳು ಸಾರ್ಥಕವಾದಾವು. ಈ ಹಿನ್ನೆಲೆಯಲ್ಲಿ ಬಹಳ ಹಿಂದೆ ಬರೆದ ನಮ್ಮ ಕವಿತೆ:

**ಮತ್ಸರದ ಬತ್ತಿ**

**ಹತ್ತಿ ಉರಿಯುತಿದೆ ಸುತ್ತಲೂ ಮತ್ಸರದ ಸುರುಸುರು ಬತ್ತಿ**
**ಹಚ್ಚಲಾದೀತೇ ಅದರಿಂದ ಮತ್ತೊಂದು ಹಣತೆಯ ಬತ್ತಿ!**
**ಹಣತೆ ಹಣತೆಯು ಕೂಡಿದರೆ ಕಂಗೊಳಿಸುವುದು ಜ್ಯೋತಿ**
**ಹಣತೆ ಬಿರುಸಿನ ಕುಡಿಕೆಯು ಕೂಡಿದರೆ ಉಗುಳುವುದು ಬೆಂಕಿ**

**ಯಾರ ಬದುಕಿನ ಅಂಗಳದಲ್ಲಿ ಯಾರು ಇಡುವರೋ ಬತ್ತಿ**
**ಅದು ಸಿಡಿದಾಗಲೇ ಗೊತ್ತು ಬತ್ತಿ ಇಟ್ಟವನ ಯುಕ್ತಿ!**
**ಸುಳಿಯದಿರು ಸತ್ತಂತಿಹ ಪಟಾಕಿಗಳಿದ್ದೆಡೆಯಲ್ಲಿ**
**ಸಿಡಿಯುವುದು ಜೋಕೆ ನಿನ್ನ ಕಣ್ಣಾಲಿ!**
**ಮತ್ತೆಂದೂ ಕಾಣಲಾರೆ ಮುಂದಿನ ದೀಪಾವಳಿ!**

27.10.2011

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑